# ಸುದ್ದಿ ಸಂಚಯ

## ಬೆಳಗಾವಿಯಲ್ಲಿ 'ವಸಂತ ವಿಹಾರ'

ಹಿಂದಿನ ವರ್ಷದಂತೆ ಈ ವರ್ಷವೂ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ 'ವಸಂತ ವಿಹಾರ' ಎಂಬ ಮಕ್ಕಳ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿತ್ತು. ೧೦-೧೬ ವಯಸ್ಸಿನ ಮಕ್ಕಳಿಗಾಗಿ ಎರಡು ತಂಡಗಳಲ್ಲಿ, ಏಪ್ರಿಲ್ ೧೫ ರಿಂದ ಮೇ ೧೦ ರವರೆಗೆ ಶಿಬಿರವು ನಡೆಯಿತು. ಒಟ್ಟಾರೆ ೧೪೦ ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ವ್ಯಕ್ತಿತ್ವ ವಿಕಸನ, ಸಂಸ್ಕೃತ, ಭಾರತೀಯ ಪರಂಪರೆ ಮತ್ತು ಭಾಷಾಕಲಿಕೆಯ ವಿಧಾನಗಳು, ಸೃಜನಾತ್ಮಕ ಚಿಂತನೆ, ಕಥಾ ನಿರೂಪಣೆ, ದೃಶ್ಯಶ್ರಾವ್ಯಮಾಧ್ಯಮ, ಗ್ರಂಥಾಲಯ ಉಪಯೋಗ – ಇವುಗಳನ್ನು ಈ ಶಿಬಿರವು ಒಳಗೊಂಡಿತ್ತು. ಇದಲ್ಲದೆ, ವೇದಪಾರಾಯಣ, ಭಜನೆ, ಸುಭಾಷಿತಗಳು, ಭಗವದ್ಗೀತಾ ಪಾರಾಯಣ, ಯೋಗಾಸನಗಳು, ಧ್ಯಾನ, ದಿವ್ಯತ್ರಯರ ಜೀವನ ಮತ್ತು ಸಂದೇಶ ಮತ್ತು ಮಹಾಪುರುಷರ ಜೀವನ ಚರಿತ್ರೆಗಳ ಬಗ್ಗೆ ಮಾಹಿತಿ – ಇವುಗಳನ್ನೂ ಶಿಬಿರದಲ್ಲಿ ಹೇಳಿಕೊಡಲಾಯಿತು.



## ಮಂಗಳೂರಿನಲ್ಲಿ ಶಾಲಾಸಾಮಗ್ರಿಗಳ ವಿತರಣೆ



೨೦೦೯, ಮೇ ೨೪, ರವಿವಾರದಂದು ಮಂಗಳೂರಿನ ರಾಮಕೃಷ್ಣ ಮಿಷನ್‌ನಲ್ಲಿ ವಿವೇಕಾನಂದ ತರಬೇತಿ ಕೇಂದ್ರದ (ಉಚಿತ ತರಬೇತಿ ಕೇಂದ್ರ) 'ನೂತನ ಶೈಕ್ಷಣಿಕ ವರ್ಷದ ಉದ್ಘಾಟನೆ ಮತ್ತು ಬಡವಿದ್ಯಾರ್ಥಿಗಳಿಗೆ ಉಚಿತ ಶಾಲಾ ಸಾಮಗ್ರಿಗಳ ವಿತರಣೆ ಕಾರ್ಯಕ್ರಮ' ವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪೂರ್ಣಕಾಮಾನಂದಜಿಯವರ ದಿವ್ಯ ಉಪಸ್ಥಿತಿಯಲ್ಲಿ ನಿಟ್ಟೆ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎನ್. ವಿನಯ ಹೆಗ್ಡೆಯವರು ಉದ್ಘಾಟಿಸಿ ಶುಭ ಹಾರೈಸಿದರು ಹಾಗೂ ಶಾಲಾ ಚೀಲ, ಸಮವಸ್ತ್ರ, ನೋಟ್‌ಪುಸ್ತಕಗಳು ಹಾಗೂ ಇತರೆ ಶಾಲಾ ಸಾಮಗ್ರಿಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಸುಮಾರು ರೂ. ೧ ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಶಾಲಾಸಾಮಗ್ರಿಗಳನ್ನು ೧೫೦ ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಆಶ್ರಮದ ವತಿಯಿಂದ ವಿತರಿಸಲಾಯಿತು.

## ಪಶ್ಚಿಮ ಬಂಗಾಳದಲ್ಲಿ ಪರಿಹಾರ ಕಾರ್ಯ

ಇತ್ತೀಚಿಗೆ 'ಅಯಿಲಾ' ಎಂಬ ಹೆಸರಿನ ಚಂಡಮಾರುತವು ಪಶ್ಚಿಮಬಂಗಾಳದ ಕೆಲವು ಪ್ರದೇಶಗಳಿಗೆ ಅಪ್ಪಳಿಸಿತು. ಇದರಿಂದ ಸಂತ್ರಸ್ತರಾದ ಜನರ ಪರಿಹಾರಕ್ಕೆ ರಾಮಕೃಷ್ಣ ಮಿಷನ್ ಮುಂದಾಗಿದೆ. ತನ್ನ ಹಲವು ಕೇಂದ್ರಗಳ ಮೂಲಕ ಸಾವಿರಾರು ಜನರಿಗೆ ಸಹಾಯಹಸ್ತವನ್ನು ಚಾಚಿದೆ. ಈ ಪರಿಹಾರ ಕಾರ್ಯಗಳನ್ನು ಮಿಷನ್ನಿನ **ನರೇಂದ್ರಪುರ್, ಬೇಲ್‌ಘರಿಯಾ, ಮಾನಸಾದ್ವೀಪ್, ರಹರಾ, ಸಿಕ್ರಾ-ಕುಲೀನ್ ಗ್ರಾಮ್, ಕೊಲ್ಕತಾದ ಸ್ವಾಮಿ ವಿವೇಕಾನಂದರ ಜನ್ಮಸ್ಥಳದ ಕೇಂದ್ರ, ಟಾಕಿ, ಬೇಲೂರಿನ ಶಾರದಾಪೀಠ** ಮತ್ತು **ಬಾಂಕುರಾ ಕೇಂದ್ರಗಳ** ಮೂಲಕ ನಡೆಸಲಾಗುತ್ತಿದೆ. ಸಂತ್ರಸ್ತ ಜನರಿಗೆ ಅಕ್ಕಿ, ಅವಲಕ್ಕಿ, ಸಕ್ಕರೆ, ಬೆಲ್ಲ, ಹಾಲಿನ ಪುಡಿ, ಹ್ಯಾಲೋಜಿನ್ ಗುಳಿಗೆಗಳು – ಇವುಗಳನ್ನು ವಿತರಿಸಲಾಗಿದೆ. ಇದಲ್ಲದೆ ಹಲವಾರು ಕಡೆ, ಬೇಯಿಸಿದ ಆಹಾರ ವನ್ನೂ ಒದಗಿಸಲಾಗಿದೆ. ಪರಿಹಾರ ಕಾರ್ಯವು ಈ ವರದಿ ಬಂದ ಸಮಯಕ್ಕೆ ಇನ್ನೂ ಮುಂದುವರಿಯುತ್ತಿದೆ.



Managing Editor : Swami Nityasthananda Editor : Swami Vireshananda
Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.